(ಶ್ರೀ ಎಚ್. ಸಿದ್ದವೀರಪ್ಪ)

ಕೊಡುತ್ತಾರೆ ಎನ್ನುವುದನ್ನು ನೋಡಬೇಕು. ಆಯುರ್ವೇದ, ಅಲೋಪತಿ, ಯೂನಾನಿ ನೇಚರ್‌ಕ್ಯೂರೋಪತಿ ಬಗ್ಗೆ ವಿಶೇಷ ಸ್ಥಾನ ಕೊಟ್ಟು ಇದನ್ನು ಬದಲಾಯಿಸಬೇಕು ಎನ್ನುವುದ ಸರ್ಕಾರದ ಏರ್ಪಾಡು.

ಶ್ರೀ ಎಸ್. ಪೈ. ಪಾಟೀಲ್.—ಅಲೋಪತಿಗೆ ಯೂನಿವರ್ಸಿಟಿ ಬೇಕಾಗುತ್ತದೆ. ಆಯುರ್ವೇದಕ್ಕೆ ಯೂನಿವರ್ಸಿಟಿ ಬೇಡವೆ ?

ಶ್ರೀ ಎಚ್. ಸಿದ್ದವೀರಪ್ಪ.—ಕಾಲೇಜುಗಳೇ ಸರಿಯಾಗಿ ಇಲ್ಲ, ಯೂನಿವರ್ಸಿಟಿಗೆ ಏತಕ್ಕೆ ಹೋಗೋಣ? ಈಗ ಇರತಕ್ಕ ಕಾಲೇಜುಗಳು ಸರಿಯಾಗಿ ನಡೆಯಬೇಕು, ಆಯುರ್ವೇದ ಕಾಲೇಜು ಸರಿಯಾಗಿ ನಡೆಯಬೇಕು, ಅವು ಸರಿಯಾಗಿ ನಡೆಯುವವರೆಗೂ ಆಯುರ್ವೇದ ಯೂನಿವರ್ಸಿಟಿ ಏತಕ್ಕೆ ತೆಗೆಯೋಣ ? ಯೂನಿವರ್ಸಿಟಿ ತೆಗೆಯತಕ್ಕ ಮಟ್ಟಕ್ಕೆ ಇನ್ನು ಹೋಗಿಲ್ಲ.

ಶ್ರೀ ಸಿ. ಕೆ. ಮೊಹಮದ್ ಸೈಫುದ್ದೀನ್.—ಮೈಸೂರು ಯುನಾನಿ ಕಾಲೇಜ್ ಬಂದ್ ಆಗಿದೆ ಯೆಂದು ತಿಳಿದುಬಂದಿದೆ. ಇದು ನಿಜವೇ ?

ಶ್ರೀ ಎಚ್. ಸಿದ್ದವೀರಪ್ಪ.—ಯುನಾನಿ ಕಾಲೇಜ್ ಬಂದ್ ಆಗಿಲ್ಲ, ಆಯುರ್ವೇದ ಕಾಲೇಜಿನಲ್ಲಿ ಯುನಾನಿ ಇದೆ. ಯುನಾನಿ ಕಾಲೇಜ್ ವರದಿ ಪ್ರಕಾರ ಸೇರತಕ್ಕವರ ಸಂಖ್ಯೆ ಕಡಿಮೆಯಾಗಿದೆ. ಹೆಚ್ಚು ಸೇರತಕ್ಕವರ ಸಂಖ್ಯೆ ಕಂಡುಬಂದಲ್ಲ, ಅಲ್ಲಿ ಕನಿಷ್ಠ ಎಷ್ಟು ವಿದ್ಯಾರ್ಥಿಗಳು ಇರಬೇಕೋ ಅಷ್ಟು ವಿದ್ಯಾರ್ಥಿಗಳು ಸೇರಿದರೆ, ಈಗಲೂ ಸಹ ಸಂಬಂಧಪಟ್ಟ ಏನು ಏನು ಸ್ಟಾಫ್ ಬೇಕೋ ಅದನ್ನು ಸರ್ಕಾರದವರು ಅಪಾಯಿಂಟ್ ಮಾಡುತ್ತೇವೆ.

ಶ್ರೀ ಸಿ. ಕೆ. ಮೊಹಮದ್ ಸೈಫುದ್ದೀನ್.—ಅಲ್ಲಿ ಸ್ಟಾಫ್ ಇಲ್ಲ, ಕಾಲೇಜು ಕ್ಲೋಸ್ ಆಗಿದೆ ಎಂದು ಕೇಳಿದ್ದೇವೆ, ಇದು ನಿಜವೇ ?

ಶ್ರೀ ಎಚ್. ಸಿದ್ಧವೀರಪ್ಪ.—ನನಗೆ ತಿಳಿದುಬಂದಿರುವ ಪ್ರಕಾರ ಯುನಾನಿಗೆ 3 ಅಪ್ಲಿಕೇಷನ್ ಇತ್ತು, ಈಚೆಗೆ ಅವರು ಆಯುರ್ವೇದಕ್ಕೆ ಸೇರಿಕೊಂಡಿರಬಹುದು. ಯುನಾನಿಗೆ ಪ್ರೊಪೋಸಲ್ ಮಾಡಬೇಕು ಆಯುರ್ವೇದಕ್ಕೆ ಎಷ್ಟು ಮುನ್ನಣಿ ಕೊಡುತ್ತೇವೆಯೋ ಅಷ್ಟೇ ಯುನಾನಿಗೂ ಮುನ್ನಣಿ ಕೊಡಬೇಕು ಎಂದು ಸರ್ಕಾರದ ಉದ್ದೇಶ ಇದೆ, ಮುಂದೆ ಹೆಚ್ಚಿನ ಸಂಖ್ಯೆಯಲ್ಲಿ ಬಂದರೆ ಸಪರೇಟ್ ಒಂದು ಸೆಕ್ಷನ್ ಓಪನ್ ಮಾಡುವಕ್ಕೆ ಪ್ರಯತ್ನ ಮಾಡುತ್ತೇವೆ.

Lease of Area in Sandur Taluk to a Mining Company

336. **Sri H. D. DEVEGOWDA** (Holenarasipura).—

Will the Minister for Industries be pleased to state:—

(*a*) whether an area of 19 sq. miles in Sandur Taluk consisting of Manganese and Iron ore deposits has been leased out to a Mining Company ;

(*b*) if so, the name of the Company and the Directors of the Company ;

(*c*) whether this area which is over and above the ceiling limit fixed under the Mineral Concession rules, is leassed out on the specific condition of establishing a Ferro Manganese plant ;

(*d*) if so, whether a plant has been established within the stipulated period ;

(*e*) if not, the action taken by the Governor in the matter ?

Sri S. M. KRISHNA (Minister for Industries).—

(*a*) Yes.

(*b*) M/s. Sandur Manganese and Iron Ore Ltd.

The following are the Directors of the Company:—

1. Shri Y. R. Ghorpade
2. Shri Rajagopal Tondaiman
3. Sir Shahaji Chhatrapathi
4. Shri R. M. Deshmukh
5. Dr. Rustom Gavasji Cooper
6. Mr. Luis Mikolajoczek
7. Mr. S. Ph. Bacalu
8. Shri E. B. Desai
9. Shri V. C. Vaidya
10. Smt. Sow Sushiladevi Ghorpade

(*c*) Yes.

(*d*) Yes.

(*e*) Does not arise in view of reply to clause (*d*).

ಶ್ರೀ ಎಚ್. ಡಿ. ದೇವೇಗೌಡ.—(ಡಿ)ಗೆ ಉತ್ತರ ಹೇಳಿದ್ದೀರಿ. ಈಗ ಹಾಕಿರತಕ್ಕದ್ದು ಫೆರ್ರೊಮ್ಯಾಂಗನಿಸ್ ಪ್ಲಾಂಟ್ ಅಲ್ಲ ಪಿಗ್ ಐರನ್ ಪ್ಲಾಂಟ್. ಇದು ನಿಜ ಅಲ್ಲವೇ ?

† ಶ್ರೀ ಎಸ್. ಎಂ. ಕೃಷ್ಣ.—ಹೌದು.

ಶ್ರೀ ಎಚ್. ಡಿ. ದೇವೇ ಗೌಡ.—ಹಾಗಿದ್ದ ಮೇಲೆ ತಪ್ಪು ಉತ್ತರ ಸಭೆಗೆ ಕೊಟ್ಟಿರತಕ್ಕ ಬಗ್ಗೆ ವಿಷಾದ ವ್ಯಕ್ತಪಡಿಸಿದರೆ ಬಹಳ ಒಳ್ಳೆಯದು.

Sri S. M. KRISHNA.—I would like to give the background why the change was made. ಇದು ಬಹಳ ಹಳೇ ಮ್ಯಾನ್ಸ್. ಬೆಲ್ಜಿಯಂ ಕಂಪನಿಯವರು ಮೊದಲು ಲೀಸ್‌ನಿಂದ 1903ರಲ್ಲಿ ಪಡೆದಿದ್ದರು, ಅನಂತರ ಸೊಂಡೂರು ಮಹಾರಾಜರು ಆ ಲೀಸ್‌ನ್ನು ಪಡೆದರು. ಇವೊತ್ತು ಇದು ಪಬ್ಲಿಕ್ ಲಿಮಿಟೆಡ್ ಕಂಪನಿಯಾಗಿದೆ. ಲೀಸ್ ಕೊಡುವಾಗ ಒಂದು ಷರತ್ತು ಹಾಕಿದ್ದರು. ಅದೇನೆಂದರೆ ಇಲ್ಲಿ ಫೆರ್ರೋ ಮ್ಯಾಂಗನೀಸ್ ಪ್ಲಾಂಟ್ ಒಂದನ್ನು ಹಾಕಬೇಕೆಂದು. ಆದರೆ ತೀರ್ಮಾನ ಮಾಡತಕ್ಕ ಕಾಲದಲ್ಲಿ ದೇಶದಲ್ಲಿ ಅಧಿಕವಾಗಿ ಫೆರ್ರೋ ಮ್ಯಾಂಗನೀಸ್ ಉತ್ಪತ್ತಿ ಇತ್ತು there was glut in the market. So they were given permission to put up the pig iron plant and it has been done after getting the needed clearance and permission from the Union Government.

ಶ್ರೀ ಹೆಚ್. ಡಿ. ದೇವೇಗೌಡ.—ಇದರಲ್ಲಿ 19 ಚದುರ ಮೈಲಿಗಳಷ್ಟು ಲೀಸು ಮಾಡಿದ್ದೇವೆ ಎಂದು ಹೇಳುತ್ತಾರೆ. ಆದರೆ ಅಗ್ರಿಮೆಂಟಿನ ಟರ್ಮ್ಸ್ ಪ್ರಕಾರ ಹತ್ತು ಚದುರಮೈಲಿಗಳ ಮೇಲೆ ಇವರಿಗೆ ಕೊಡುವುದಕ್ಕೆ ಸಾಧ್ಯವಿಲ್ಲ. ಅಗ್ರಿಮೆಂಟಿನ ಪ್ರಕಾರ ಕೊಡುವ ಜಮೀನು ಕೊಟ್ಟು ಉಳಿಕೆಯಾದ ಭೂಮಿ ಪಡೆಯಲು ಸರಕಾರ ಯಾವುದಾದರೂ ಕ್ರಮ ಕೈಗೊಳ್ಳುವುದೇ?

ಶ್ರೀ ಎಸ್. ಎಂ. ಕೃಷ್ಣ.—ಇದು ಇಪ್ಪತ್ತು ವರ್ಷಗಳ ಕಾಲದ ಒಂದು ಲೀಸು. And it is renewable every 20 years. Besides this is an integrated mine. This has been considerably mechanised and this is doing quite well. ಈಗ ಇದರಲ್ಲಿ 19 ಚದುರಮೈಲಿಗಳನ್ನು ಕೊಟ್ಟಿದ್ದಾರೆ, ಮತ್ತೆ ಪುನಃ ರಿನ್ಯೂ ಮಾಡುವ ಕಾಲದಲ್ಲಿ ಇದನ್ನು ಪರಿಶೀಲನೆ ಮಾಡಬಹುದು.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಹೇಳುವುದು ಈಗಿರುವ ಕಂಪೀಷನ್ಸ್ ಪ್ರಕಾರವೇ ಇವರು ಉಲ್ಲಂಘನೆ ಮಾಡಿದ್ದಾರೆ. ಆದುದರಿಂದ ಇಪ್ಪತ್ತು ವರ್ಷಗಳ ಕಾಲ ಕಾಯಬೇಕಾದ ಅಗತ್ಯ ಇಲ್ಲ, ಇರುವ ಟರ್ಮ್ಸ್ ಪ್ರಕಾರ ಈಗಾಗಲೇ ಇಲ್ಲಿನ ಷರತ್ತುಗಳಂತೆ ಕೆಲಸ ಮಾಡದೇ ಇರುವುದರಿಂದ ಈಗಲೇ ಇದರ ಬಗ್ಗೆ ಪುನರ್‌ವಿಮರ್ಶೆ ಏಕೆ ಮಾಡಬಾರದು ?

ಶ್ರೀ ಎಸ್. ಎಂ. ಕೃಷ್ಣ.—ಇದು ನಾವು ಈಗ ಕೊಟ್ಟ ಲೀಸಲ್ಲ. ಹಿಂದೆ ಆಗಿರುವಕ್ಕ ಒಂದು ಒಪ್ಪಂದ, ಆ ಒಪ್ಪಂದದ ಪ್ರಕಾರವೇ ಇದರ ಲೀಸು ಕೊಟ್ಟಿರುವುದು, ಹಿಂದೆ ಆದರೂ ಷರತ್ತುಗಳನ್ನು ವಿರೋಧ ಮಾಡಿದ್ದಾರೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಇಲ್ಲಿ ಹೇಳುತ್ತಿದ್ದಾರೆ, ಇದರಲ್ಲಿ ಹತ್ತು ಚದುರಮೈಲಿಗಳಿಗಿಂತ ಹೆಚ್ಚು ಇವರಿಗೆ ಕೊಡಬೇಕಾಗಿಲ್ಲ ಎಂದು ಹೇಳುತ್ತಾರೆ. It may not be economically feasible. ಇಲ್ಲಿ ಪೆಕನ್ಷೆಸು ಮಾಡಿ ಬಹಳ ಚೆನ್ನಾಗಿ ಅದಿರನ್ನು ಎಕ್ಸ್‌ಪ್ಲೋರ್ ಮಾಡಿ ಎಕ್ಸ್‌ಪೋರ್ಟ್ ಮಾಡುತ್ತಿದ್ದಾರೆ, ಇದು ಹಿಂದೆ ಆಗಿರುವ ಒಂದು ಲೀಸು. ನಾವೇನೂ ಮಾಡರಾಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಇದೇ ಪ್ರದೇಶದಲ್ಲಿ ಎನ್. ಎಂ. ಡಿ. ಸಿ. ಯವರ ದೋಣಿಮಲೈ ಐರನ್ ಓರ್ ಮೈನ್ಸ್ ಕೂಡ ಇದೆ ಮತ್ತು ಇವೂ ಕೂಡ ಒಳ್ಳೆಯ ಕೆಲಸಗಳನ್ನು ಮಾಡುತ್ತಿದೆ. ಇಲ್ಲಿ ಸಿಗುವ ಕಬ್ಬಿಣದ ಅದಿರು ಅತಿ ಉತ್ತಮವಾದುದು ಎಂದು ಸರಕಾರಕ್ಕೆ ಗೊತ್ತಾಗಿದೆ. ಈಗಿನ ಸರಕಾರದ ನೀತಿಯಂತೆ ಇಂತಹ ಮುಖ್ಯ ಕೈಗಾರಿಕೆಗಳನ್ನು ರಾಷ್ಟ್ರೀಕರಣ ಮಾಡಬೇಕು ಎಂದು ಇರುವುದರಿಂದ ಇದರ ಬಗ್ಗೆ ಏನಾದರೂ ಇಲ್ಲಿ ಆಲೋಚನೆ ಮಾಡುತ್ತಿದ್ದೀರಾ ?

ಶ್ರೀ ಎಸ್. ಎಂ. ಕೃಷ್ಣ.—ಪ್ರಗತಿಪರವಾಗಿ ಕೆಲಸ ಮಾಡಲು ರಾಷ್ಟ್ರೀಕರಣ ಮಾಡಬೇಕು ಎನ್ನುವುದೇ ಬಹುಶಃ ಕೇಂದ್ರ ಸರಕಾರದ ಉದ್ದೇಶ. ಆದರೂ ಈಗ ಇಲ್ಲಿರುವ ಪಿಗ್ ಐರನ್ ಪ್ಲಾಂಟು ಕೆಲಸ ಮಾಡುವುದೂ ಅಲ್ಲದೆ ಇಲ್ಲಿ ಸಿಗುವ ಕಬ್ಬಿಣದ ಅದಿರನ್ನು ಹೊರಗಡೆಗೆ ಎಕ್ಸ್‌ಪೋರ್ಟ್ ಮಾಡಿ ನಮ್ಮ ರಾಜ್ಯಕ್ಕೆ ಫಾರಿನ್ ಎಕ್ಸ್‌ಚೇಂಜ್ ದೊರಕಿಸಿಕೊಡುತ್ತಿದೆ. ಆ ದೃಷ್ಟಿಯಿಂದ ಕಾಲ ಬಂದಾಗ ಇದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ದೋಣಿಮಲೈ ಪ್ರಾಜೆಕ್ಟ್ ಬಗ್ಗೆ ಲೀಸು ಮಾಡುವಾಗ ಅದರ ಕಾರ್ಯನಿರ್ವಹಣೆಯನ್ನು ವಿಮರ್ಶೆಮಾಡಬೇಕಾದ ಕಾಲ ಬರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಉತ್ತರದಲ್ಲಿ ಹತ್ತು ಜನ ಡೈರೆಕ್ಟರುಗಳ ಹೆಸರು ಕೊಟ್ಟಿದ್ದಾರೆ. ಇದರಲ್ಲಿ ಹತ್ತನೆಯವರಾದ ಶ್ರೀಮತಿ ಸ್ರಿ. ಸುಶೀಲಾದೇವಿ ಘೋರ್ಪಡೆಯವರಿಗೂ ಈಗಿರುವ ನಮ್ಮ ಅರ್ಥಮಂತ್ರಿಗಳಿಗೂ ಸಂಬಂಧವಿದೆಯೇ?

ಶ್ರೀ ಎಸ್. ಎಂ. ಕೃಷ್ಣ.—ಇದೇನೂ ಮುಚ್ಚುತಕ್ಕ ಪ್ರಶ್ನೆಯಲ್ಲ, ಜಗತ್ತಿಗೇ ಗೊತ್ತಿರತಕ್ಕ ವಿಚಾರ.

ಶ್ರೀ ಹೆಚ್. ಡಿ. ದೇವೇಗೌಡ.—ಇದು ಪ್ರಪಂಚಕ್ಕೆ ಗೊತ್ತಿರಬಹುದು. ತಾವು ಈ ಮನೆಗೆ ಬೇಕಾದುದನ್ನು ಕೇಳಬಹುದು.

Sri S. M. KRISHNA.—I will not talk of 'Jagath'. I will confine myself to this '*mane.*' ಶ್ರೀಮತಿ ಸುಶೀಲಾದೇವಿ ಘೋರ್ಪಡೆಯವರಿಗೂ ಅರ್ಥಮಂತ್ರಿಗಳಿಗೂ ಸಂಬಂಧ ಇದೆ.

Sri C. M. ARUMUGAM.—How many members of Sri Ghorpade's family are there as Directors of this Company?

Sri S. M. KRISHNA.—There are a few.

Sri C. M. ARUMUGAM.—I want to know the number.

Sri S. M. KRISHNA.—It is a public limited company. I cannot keep track of who is related to Sri Ghorpade and who is not. I have placed the names on the Table of the House. Only Sri Ghorpade's mother and father are Directors of this Company.

Sri B. V. KAKKILAYA—What is the date of expiry of this mining lease ?

Sri S. M. KRISHNA.—I would need notice.

Sri B. B. SAYANAK.—Is it not a fact that this Company is the best Company in the State and is running on sound financial position ?

Sri S. M. KRISHNA.— That is the impression of the Government also.

Sri C. M. ARUMUGAM.—Is this Company in collaboration with any foreign country ? Are there any foreigners as Directors ?

Sri S. M. KRISHNA.—I may tell that this does not arise out of this Question.

Sri C. M. ARUMUGAM.—Madam, I am keen on knowing whether this Company is having any foreign collaboration and whether any foreigners are working as Directors in this Company?

Sri S. M. KRISHNA.—There is no technical collaboration now. There is only financial collaboration with a foreign company. Technically only Indians and mostly Mysoreans are managing this Company.

Sri C. M. ARUMUGAM.—Has this Company taken the permission of Government of India and the State Government, if necessary, to have collaboration, either financial or technical, with the foreign country ?

Sri S. M. KRISHNA.—This is a most extraordinary question coming from a senior and learned Member like Sri Arumugam. There can be no collaboration agreement without the clearance and permission of the Government of India.

ಶ್ರೀ ಹೆಚ್. ಡಿ. ದೇವೇಗೌಡ.—29 ಚದುರ ಮೈಲುಗಳಷ್ಟು ಲೀಸು ಮಾಡಿ ಕೊಟ್ಟಿರುವುದು ಯಾವಾಗ? ಮತ್ತು ಇಷ್ಟು ಚದುರಮೈಲುಗಳಲ್ಲೂ ಅದುರನ್ನು ತೆಗೆಯುತ್ತಿದ್ದಾರೆಯೇ ? ಇಲ್ಲವೇ ಕೆಲವು ಕಡೆ ಮಾತ್ರ ತೆಗೆದು ಉಳಿದವನ್ನು ಗುತ್ತಿಗೆ ರೀತಿ ಮಾಡಿಕೊಂಡಿದ್ದಾರೆಯೇ ?

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಶ್ರೀ ದೇವೇಗೌಡರಿಗೆ ಕೂಡ ಗೊತ್ತಿದೆ. ಅದುರನ್ನು ಯಾವ ರೀತಿ ತೆಗೆಯುತ್ತಿದ್ದಾರೆ ಎನ್ನುವುದು. 29 ಚದುರಮೈಲುಗಳಲ್ಲಿ ಕೆಲವು ಪಾಕೆಟ್ಸ್‌ಗಳು ಇರುತ್ತವೆ, ಅಲ್ಲಿ ಅದಿರನ್ನು ಎಕ್ಸ್‌ಟ್ರಾಕ್ಟ್ ಮಾಡುತ್ತಾರೆ ಮತ್ತು ಬೇರೆ ಪ್ರದೇಶಗಳಲ್ಲಿ ಪರಿಶೀಲನೆ ಮಾಡುತ್ತಿರುತ್ತಾರೆ, ಪೂರ್ತಿ 29 ಚದುರಮೈಲುಗಳಲ್ಲೂ ಕೆಲಸಗಳನ್ನು ಮಾಡುವುದಿಲ್ಲ. ಇಲ್ಲಿ ಅದಿರು ತಗೆಯುವ ಕೆಲಸ ಚೆನ್ನಾಗಿ ನಡೆಯುತ್ತಿದೆ.

ಶ್ರೀ ಹೆಚ್.ಡಿ. ದೇವೇಗೌಡ.—ಹತ್ತು ವರ್ಷಗಳಿಂದ ಇಲ್ಲಿ ಯಾವ ರೀತಿ ಅದಿರು ತೆಗೆಯುತ್ತಿದ್ದಾರೆ ಎಂದು ನಾನು ಪ್ರಶ್ನೆ ಕೇಳಿದೆ. ಮತ್ತು ಇದನ್ನು ಯಾವಾಗ ಲೀಸ್‌ಗೆ ಕೊಟ್ಟದ್ದು ಎಂದೂ ಕೂಡ ಕೇಳಿದೆ. ಅಲ್ಲದೆ ಇಲ್ಲಿನ ಷರತ್ತುಗಳನ್ನು ಉಲ್ಲಂಘನೆ ಮಾಡಿರುವುದರಿಂದ ಇದರ ಬಗ್ಗೆ ಏಕೆ ಪುನರ್ ವಿಮರ್ಶೆ ಮಾಡಬಾರದು ?

ಶ್ರೀ ಎಸ್ ಎಂ. ಕೃಷ್ಣ.—ಲೀಸ್ ಆಗಿರುವುದು 1954ನೇ ಇಸವಿಯಲ್ಲಿ.